# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 680 |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಶಿಥಿಲಾವಸ್ಥೆಯ ಕಟ್ಟಡಗಳನ್ನು ಹೊಂದಿರುವ ಶಾಲೆಗಳ ಸಂಖ್ಯೆ ಎಷ್ಟು; ಶೌಚಾಲಯಗಳನ್ನು ಹೊಂದಿರದ ಇರುವ ಶಾಲೆಗಳ ಸಂಖ್ಯೆ ಎಷ್ಟು; ಗ್ರಂಥಾಲಯಗಳನ್ನು ಹೊಂದಿರದೆ ಇರುವ ಶಾಲೆಗಳ ಸಂಖ್ಯೆ ಎಷ್ಟು; ಕುಡಿಯುವ ನೀರಿನ ಸಮಸ್ಯೆ ಇರುವ ಶಾಲೆಗಳ ಸಂಖ್ಯೆ ಎಷ್ಟು; ಆಟದ ಮೈದಾನ ಇಲ್ಲದೆ ಇರುವ ಶಾಲೆಗಳ ಸಂಖ್ಯೆ ಎಷ್ಟು; ಬೇಡಿಕೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುವ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು); | • ರಾಜ್ಯದ 91 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 291 ಕೊಠಡಿಗಳು ಭಾಗಶಃ ಶಿಥಿಲಾವಸ್ಥೆಯಲ್ಲಿರುತ್ತದೆ.<br>• ಎಲ್ಲಾ ಶಾಲೆಗಳಲ್ಲಿ ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯಗಳನ್ನು ಒದಗಿಸಲಾಗಿದೆ. ಪ್ರಸ್ತುತ ದುರಸ್ತಿ ಅಗತ್ಯವಿರುವ 89 ಶೌಚಾಲಯಗಳನ್ನು ದುರಸ್ತಿಗೊಳಿಸಲು ಕ್ರಮವಹಿಸಿದೆ.<br>• ಎಲ್ಲಾ ಶಾಲೆಗಳಲ್ಲಿ ಜಲಜೀವನ್ ಮಿಷನ್ ಅಡಿಯಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗಿದ್ದು, ಪ್ರಸ್ತುತ 34 ಶಾಲೆಗಳಲ್ಲಿ ಕುಡಿಯುವ ನೀರಿನ ಪ್ಲಂಬಿಂಗ್ ದುರಸ್ತಿ ಅಗತ್ಯವಿದ್ದು, ಆಗಿಂದಾಗಲೇ ದುರಸ್ತಿಗೊಳಿಸಲು ಕ್ರಮವಹಿಸಿದೆ.<br>• ರಾಜ್ಯದಲ್ಲಿ ಕಾಂಪೌಂಡ್ ಸೌಲಭ್ಯವಿಲ್ಲದ 4606 ಶಾಲೆಗಳಲ್ಲಿ ಕಾಂಪೌಂಡ ನಿರ್ಮಿಸಲು ಅನುದಾನ ಲಭ್ಯವಿರುವುದಿಲ್ಲ. ನರೇಗಾ ಸಹಯೋಗದೊಂದಿಗೆ ಆದ್ಯತೆಯ ಮೇರೆಗೆ ಸೌಲಭ್ಯವನ್ನು ಒದಗಿಸಲು ಕ್ರಮವಹಿಸಿದೆ.<br>• ರಾಜ್ಯದಲ್ಲಿರುವ 46,112 ಸರ್ಕಾರಿ ಶಾಲೆಗಳ ಪೈಕಿ 45,506 ಶಾಲೆಗಳು ಸ್ವಂತ ಕಟ್ಟಡವನ್ನು ಹೊಂದಿರುತ್ತದೆ. 322 ಶಾಲೆಗಳು ಬಾಡಿಗೆರಹಿತ ಕಟ್ಟಡದಲ್ಲಿ, 71 ಶಾಲೆಗಳು ಇತರೆ ಇಲಾಖೆಯ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. 208 ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ಹಾಗೂ 5 ಶಾಲೆಗಳು ತಾತ್ಕಾಲಿಕ ಕಟ್ಟಡಗಳಲ್ಲಿ ನಡೆಯುತ್ತಿವೆ.<br><br>ಜಿಲ್ಲಾವಾರು ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.<br><br>ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಅನುದಾನ ಲಭ್ಯತೆಯನ್ನು ಆಧರಿಸಿ ಅಗತ್ಯತೆಗೆ ಅನುಗುಣವಾಗಿ ಹಾಗೂ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹಂತಹಂತವಾಗಿ ನೂತನ ಕೊಠಡಿ ನಿರ್ಮಾಣ, ದುರಸ್ತಿ ಹಾಗೂ ಶೌಚಾಲಯ |

| | | |
|---|---|---|
| | | ನಿರ್ಮಾಣಕ್ಕೆ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. ಮೂಲಭೂತ ಸೌಕರ್ಯಗಳ ದುರಸ್ತಿ ಅಗತ್ಯವಿದ್ದಾಗ, ದುರಸ್ತಿ ಅನುದಾನವನ್ನು ಹಾಗೂ ಶೌಚಾಲಯ ನಿರ್ವಹಣಾನುದಾನವನ್ನು ಬಳಸಿಕೊಂಡು ದುರಸ್ತಿಗೊಳಿಸಿ ಬಳಸಲಾಗುತ್ತಿದೆ. |
| ಆ) | ಮೇಲ್ಕಾಣಿಸಿದ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | 2025-26ನೇ ಸಾಲಿಗೆ ರಾಜ್ಯವಲಯ ಮುಂದುವರೆದ ಯೋಜನೆಯಡಿ ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗೆ ರೂ.100.00 ಕೋಟಿಗಳ ಅನುದಾನ ನಿಗದಿಯಾಗಿದ್ದು, ರೂ. 96.89 ಕೋಟಿಗಳ ಅನುದಾನದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿದೆ.<br><br>2025-26ನೇ ಸಾಲಿನಲ್ಲಿ ನೂತನ ಕೊಠಡಿ ನಿರ್ಮಾಣಕ್ಕೆ ರೂ.360.00 ಕೋಟಿಗಳು ನಿಗದಿಯಾಗಿದ್ದು, ಈಗಾಗಲೇ 1134 ಶಾಲೆಗಳಿಗೆ 1977 ಶಾಲಾ ಕೊಠಡಿಗಳನ್ನು ರೂ.336.83 ಕೋಟಿಗಳಲ್ಲಿ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ.<br><br>2025-26ನೇ ಸಾಲಿನಲ್ಲಿ ನೂತನ ಶೌಚಾಲಯ ನಿರ್ಮಾಣ ಕಾಮಗಾರಿಗೆ ರೂ.90.00 ಕೋಟಿಗಳು ನಿಗದಿಯಾಗಿದ್ದು, 1250 ಶಾಲೆಗಳಲ್ಲಿ ರೂ.63.28 ಕೋಟಿಗಳಲ್ಲಿ 1582 ಶೌಚಾಲಯ ನಿರ್ಮಾಣ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ.<br><br>ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಮಂಜೂರಾದ/ಅನುಮೋದನೆಯಾದ ಕಾಮಗಾರಿಗಳಿಗೆ ಆಯಾ ಸಾಲಿನಲ್ಲಿ ಬಿಡುಗಡೆ ಆಗುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ನಿರ್ಮಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ. |

ಇಪಿ 78 ಯೋಸಕ 2026

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**

# ಅನುಬಂಧ-1

| ಕ್ರ. ಸಂ | ಜಿಲ್ಲೆಯ ಹೆಸರು | ಶಿಥಿಲಾವಸ್ಥೆಯಲ್ಲಿರುವ ಶಾಲೆಗಳ ಸಂಖ್ಯೆ | ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ಸಂಖ್ಯೆ | ದುರಸ್ತಿಯಿರುವ ಶೌಚಾಲಯ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ದುರಸ್ತಿ ಇರುವ ಶಾಲೆಗಳ ಸಂಖ್ಯೆ | ಕಾಂಪೌಂಡ್ ವಾಲ್ ಸೌಲಭ್ಯವಿಲ್ಲದ ಶಾಲೆಗಳ ಸಂಖ್ಯೆ | ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಲೆಗಳ ಸಂಖ್ಯೆ |
|---|---|---|---|---|---|---|---|
| 1 | BAGALKOT | 3 | 17 | 3 | 0 | 143 | 12 |
| 2 | BALLARI | 7 | 28 | 13 | 1 | 101 | 1 |
| 3 | BELAGAVI | 4 | 7 | 0 | 0 | 169 | 12 |
| 4 | BELAGAVI CHIKKODI | 9 | 23 | 0 | 1 | 208 | 5 |
| 5 | BENGALURU RURAL | 0 | 0 | 0 | 0 | 72 | 0 |
| 6 | BENGALURU U NORTH | 2 | 11 | 0 | 0 | 53 | 15 |
| 7 | BENGALURU U SOUTH | 3 | 7 | 0 | 1 | 72 | 18 |
| 8 | BIDAR | 2 | 7 | 18 | 7 | 200 | 1 |
| 9 | CHAMARAJANAGARA | 0 | 0 | 0 | 0 | 60 | 5 |
| 10 | CHIKKABALLAPURA | 0 | 0 | 0 | 0 | 206 | 5 |
| 11 | CHIKKAMANGALURU | 1 | 2 | 0 | 0 | 89 | 0 |
| 12 | CHITRADURGA | 1 | 4 | 3 | 0 | 161 | 6 |
| 13 | DAKSHINA KANNADA | 0 | 0 | 0 | 0 | 99 | 6 |
| 14 | DAVANAGERE | 0 | 0 | 0 | 0 | 57 | 13 |
| 15 | DHARWAD | 1 | 1 | 3 | 2 | 62 | 16 |
| 16 | GADAG | 0 | 0 | 0 | 1 | 58 | 4 |
| 17 | HASSAN | 0 | 0 | 0 | 0 | 338 | 2 |
| 18 | HAVERI | 3 | 5 | 0 | 0 | 148 | 5 |
| 19 | KALBURGI | 4 | 20 | 5 | 2 | 306 | 7 |
| 20 | KODAGU | 0 | 0 | 0 | 0 | 21 | 0 |
| 21 | KOLAR | 0 | 0 | 6 | 2 | 164 | 15 |
| 22 | KOPPAL | 9 | 24 | 7 | 5 | 67 | 0 |
| 23 | MANDYA | 0 | 0 | 0 | 0 | 98 | 2 |
| 24 | MYSURU | 1 | 10 | 0 | 0 | 61 | 8 |
| 25 | RAICHUR | 13 | 27 | 5 | 1 | 111 | 2 |
| 26 | RAMANAGARA | 1 | 1 | 0 | 0 | 137 | 3 |
| 27 | SHIVAMOGGA | 0 | 0 | 1 | 1 | 143 | 3 |
| 28 | TUMAKURU | 1 | 6 | 7 | 1 | 251 | 11 |
| 29 | TUMAKURU MADHUGIRI | 1 | 2 | 1 | 0 | 104 | 0 |
| 30 | UDUPI | 0 | 0 | 0 | 0 | 73 | 10 |
| 31 | UTTARA KANNADA | 0 | 0 | 0 | 0 | 113 | 6 |
| 32 | UTTARA KANNADA SIRSI | 1 | 5 | 0 | 0 | 174 | 2 |
| 33 | VIJAYANAGARA | 2 | 4 | 7 | 0 | 97 | 1 |
| 34 | VIJAYAPURA | 6 | 10 | 6 | 2 | 170 | 10 |
| 35 | YADAGIRI | 24 | 70 | 4 | 7 | 220 | 2 |
| | **Grand Total** | 99 | 291 | 89 | 34 | 4606 | 208 |

ನಿರ್ದೇಶಕರು(ಕಾರ್ಯಕ್ರಮ)
ಸಮಗ್ರ ಶಿಕ್ಷಣ ಕರ್ನಾಟಕ